

# ನಗೆಯ ಹಡಗು ಮತ್ತು ನೋವಿನ ಸಮುದ್ರ

**ಖುಷಿಯಾಗಿರಬೇಕು, ತನ್ನವರನ್ನು ಖುಷಿಯಾಗಿಟ್ಟಿರಬೇಕು ಎಂಬ ಮನುಷ್ಯನ ಪ್ರಯತ್ನಕ್ಕೆ ವಿಧಿಯೇ ಅಡ್ಡಗಾಲು ಹಾಕಿದರೆ ಏನಾಗಬಹುದು? ಎಷ್ಟೋ ಬದುಕುಗಳು ಖುಷಿಯ ಉಬ್ಬಾಯದ ಹೊಸ್ತಿಲಲ್ಲೇ ಎಡವಿ ದುಃಖದ ಪ್ರಪಾತಕ್ಕೆ ಯಾಕೆ ಬೀಳುತ್ತವೆ? ಹೀಗೆ ಹಲವು ಮೂಲಭೂತ ಪ್ರಶ್ನೆಗಳನ್ನು ಎಬ್ಬಿಸುವ ಕಿರುಚಿತ್ರ 'ಕ್ಯೂಬ್'.**

■ ಗೌರಿ

ಮಕ್ಕಳ ಜಗತ್ತನ್ನು ಅರಿತುಕೊಳ್ಳುವುದು ಬಲುಕಷ್ಟ. ಯಾವುದು ಅವರನ್ನು ಸಂತೋಷವಾಗಿಡುತ್ತದೆ, ಯಾವುದು ಅವರನ್ನು ಗಾಸಿಗೊಳಿಸುತ್ತವೆ ಎಂಬ ಸೂಕ್ಷ್ಮ ಸಂಗತಿ ಅರಿತುಕೊಳ್ಳದಿದ್ದರೆ ಇನ್ನೂ ಕಷ್ಟ. ಮಕ್ಕಳ ಚೇಷ್ಟೆ ಹಲವು ಅನಾಹುತಕ್ಕೆ ಎಡೆಮಾಡಿಕೊಡುವುದೂ ಇದೆ. 'ಕ್ಯೂಬ್' ಕಿರುಚಿತ್ರ ಮಗಳನ್ನು ಸಂತೋಷವಾಗಿಡಲು ಹರಸಾಹಸಪಡುವ ತಂದೆಯೊಬ್ಬನ ಸುತ್ತ ಬೆಳೆಯುತ್ತದೆ.

ಪೇರ್‌ಗೆ ತನ್ನ ಮಗಳೆಂದರೆ ಜೀವ. ಅವಳನ್ನು ಸಂತೋಷವಾಗಿಡಲು ಎಲ್ಲ ರೀತಿಯಿಂದಲೂ ಪ್ರಯತ್ನಪಡುತ್ತಿರುತ್ತಾನೆ. ಮಗಳ ಇಬ್ಬರು ಸ್ನೇಹಿತೆಯರನ್ನು, ಅವರ ಪೋಷಕರನ್ನು ಒಪ್ಪಿಸಿ ಮನೆಗೆ ಕರೆದುಕೊಂಡು ಬರುತ್ತಾನೆ. ಅವರ ಜೊತೆಗೆ ತಾನೂ ಆಡುತ್ತ, ಅವರನ್ನು ನಗಿಸುತ್ತ ಖುಷಿಯಾಗಿಡಲು ಯತ್ನಿಸುತ್ತಾನೆ. ಆದರೆ ಮಕ್ಕಳ ಆಟ ಅತಿರೇಕಕ್ಕೆ ಹೋಗಿ, ಈ ಕ್ಷಣದಲ್ಲಿ ಸ್ನೇಹಿತೆಯರಾಗಿದ್ದವರು ಮರುಕ್ಷಣದಲ್ಲಿ ಮುನಿಸಿಕೊಳ್ಳುತ್ತಾರೆ. ಆ ಮುನಿಸಾಟದಲ್ಲಿಯೇ ಪೇರ್‌ನ ಮಗಳನ್ನು ಅವಳ ಸ್ನೇಹಿತೆ ಮಹಡಿ ಮೇಲಿಂದ ನೂಕಿಬಿಡುತ್ತಾಳೆ. ಮಗಳ ಖುಷಿಯಾಗಿ ಏರ್ಪಡಿಸಿದ್ದ ಕೂಟವೇ ಅವಳ ಮೃತ್ಯುವಿಗೂ ಕಾರಣವಾಗುತ್ತದೆ.

ಒಂದು ದುರಂತ ಘಟನೆಯ ನಿರೂಪಣೆಯಷ್ಟೇ ಆಗದೆ, ಸಿಂಗಲ್ ಪೇರೆಂಟ್ ಒಬ್ಬನ ಬದುಕು, ಮನಸ್ಥಿತಿಗಳ ಚಿತ್ರಣವೂ ಆಗುವುದರಿಂದ ಈ ಕಿರುಚಿತ್ರ ಗಮನಸೆಳೆಯುತ್ತದೆ. ನೋಡಿಸಿಕೊಳ್ಳುವ ಕುತೂಹಲದ ಎಳೆಯನ್ನು ಇರಿಸಿಕೊಂಡೇ ಪಾತ್ರಗಳ ಮನಸ್ಸಿನೊಳಗಿನ ನಿರ್ಜನ ಬೀದಿಗಳಲ್ಲಿಯೂ ನಿರ್ದೇಶಕರು ನಮ್ಮನ್ನು ಅಡ್ಡಾಡಿಸುತ್ತಾರೆ. ಜೊತೆಗೆ ಆಧುನಿಕ ಮಾಧ್ಯಮಗಳು ಹೇಗೆ ದುರಂತದ ದಾರಿಯೆಡೆಗೆ ನೂಕುವ ಪರಿಕರವೂ ಆಗಬಲ್ಲದು ಎಂಬುದನ್ನು ಸೂಕ್ಷ್ಮವಾಗಿ ತೋರಿಸಿದ್ದಾರೆ.



**ಹೆಸರು:** ಕ್ಯೂಬ್
**ನಿರ್ದೇಶನ:** ನನ್ನ ಕ್ರಿಸ್ಟಿನ್ ಮಾಗ್ನುಸ್ಡೋಟ್ಟಿರ್
**ತಾರಾಗಣ:** ಒಲಾಫರ್ ಡರ್‍ರಿ ಒಲಾಫ್‌ಸನ್, ಆಗ್ಲಾ ಬ್ರಿಯೆಟ್, ರಾಗ್ನೇ ಉಲ್ಗಾ, ಅನ್ನಾ ಬಿಬಿವುನ್
**ಸಂಕಲನ:** ಸಿಗುರ್ಬ್ ಜೋರ್ಗ್ ಜೊನ್ಸ್‌ಡೊಟ್ಟಿರ್, ಎಯ್ರುನ್ ಹೆಲ್ಗಾ

ಮೂರು ಮಕ್ಕಳಲ್ಲಿ ಒಬ್ಬಳ ಬಳಿ ಟ್ಯಾಬ್ ಇದೆ. ಅದರಲ್ಲಿ ಅವರು ಡಾನ್ಸ್ ಮಾಡುವುದನ್ನು ಚಿತ್ರೀಕರಿಸಿಕೊಳ್ಳುತ್ತಾರೆ. ನಂತರ ಒಬ್ಬಳು ಹುಡುಗಿ ಸ್ನಾನಮಾಡುವುದನ್ನೂ ಚಿತ್ರೀಕರಿಸಿಕೊಳ್ಳುತ್ತಾರೆ. ಅದನ್ನು ಸೋಷಿಯಲ್ ಮಿಡಿಯಾಗೆ ಅಪ್‌ಲೋಡ್ ಮಾಡುತ್ತೇನೆ ಎಂದು ತಮಾಷೆಗೆ ಹೇಳುತ್ತಾರೆ. ಅದೇ ತಮಾಷೆ ಕೊನೆಗೆ ದ್ವೇಷಕ್ಕೆ ತಿರುಗಿ ಪ್ರಾಣವನ್ನೂ ತೆಗೆದಕೊಳ್ಳುತ್ತದೆ.

ಇಡೀ ಕಿರುಚಿತ್ರದಲ್ಲಿ ಈಗ, ಇನ್ನೊಂದು ಕ್ಷಣಕ್ಕೇ ಏನೋ ನಡೆಯಲಿಕ್ಕಿದೆ ಎಂಬ ರೀತಿಯಲ್ಲಿ ಗಟ್ಟಿಯಾದ ಚಿತ್ರಕಥೆ ನಮ್ಮನ್ನು ಹಿಡಿದಿಡುತ್ತದೆ. ಆದರೆ ಏನು ಆಗಲಿದೆ ಎಂಬುದು ಊಹೆಗೆ ದೊರಕುವುದಿಲ್ಲ. ಏನೂ ಆಗಲಿಕ್ಕಿಲ್ಲ ಎಂದುಕೊಳ್ಳುವ ಹೊತ್ತಿಗೆ, ಮನೆಯೆದುರು ನಿಂತಿರುವ ಪೇರ್ ಎದುರಿಗೇ ಅವನ ಮಗಳ ಶರೀರ ಕಬ್ಬಿಣದ ಸಲಾಕೆಗೆ ಚುಚ್ಚಿಕೊಂಡು ಬೀಳುತ್ತದೆ. ಯಾವುದನ್ನು ಮಗಳ ಸಂತೋಷಕ್ಕಾಗಿ ಮಾಡಿದ್ದನೋ ಅದೇ ಮಗಳ ಸಾವಿಗೂ ಕಾರಣವಾಗುತ್ತದೆ.

ತಾಂತ್ರಿಕವಾಗಿಯೂ ಈ ಕಿರುಚಿತ್ರ ಗಟ್ಟಿಯಾಗಿದೆ. ಹದವಾದ ಹಿನ್ನೆಲೆ ಸಂಗೀತ, ಮಕ್ಕಳ ಖುಷಿಯನ್ನು, ಅಸೂಯೆಯನ್ನೂ, ದುರಂತವನ್ನೂ ಎಲ್ಲಿಯೂ ಅತಿ ಅನಿಸದ ಹಾಗೆ ಚಿತ್ರೀಕರಿಸಿರುವ ರೀತಿಯೂ ಚಿತ್ರದ ಪರಿಣಾಮಕ್ಕೆ ಪೂರಕವಾಗಿಯೇ ಇದೆ.

ತನ್ನ ಎಲ್ಲ ಪ್ರಯತ್ನಗಳನ್ನೂ ಮೀರಿ ಬದುಕು ನಡೆಸುವ ಆಟದೆದುರು ಅಸಹಾಯಕನಾಗಿ ನಿಲ್ಲುವ ತಂದೆಯ ನೋವಿನ ಕಥೆಯನ್ನು ಕಟ್ಟಿಕೊಡುವ ಈ ಕಿರುಚಿತ್ರ ಜೀವನಕ್ಕೆ ಸಂಬಂಧಿಸಿದ ಹಲವು ಮೂಲಭೂತ ಪ್ರಶ್ನೆಗಳನ್ನೂ ನಮ್ಮೊಳಗೆ ಹುಟ್ಟಿಹಾಕುವುದು ಸುಳ್ಳಲ್ಲ.

ಈ ಕಿರುಚಿತ್ರ ವೀಕ್ಷಣೆಗೆ bit.ly/3oJGWXN ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.